# ಸ್ವಾತಂತ್ರ್ಯದ ಹಿಂದೆ ಬಲಿದಾನವಿದೆ



**ಶ್ವೇತಾ ಚೆಂಗಪ್ಪ ಝೀ ಕನ್ನಡದ 'ಜೋಡಿ ನಂ 1' ನಿರೂಪಕಿ**

◆ **ಸ್ವಾತಂತ್ರ್ಯೋತ್ಸವ ಅಂದ ತಕ್ಷಣ ನಿಮಗೆ ಏನೆಲ್ಲ ನೆನಪಾಗುತ್ತದೆ?**

ಕೊಡಗು ನನ್ನ ಮೂಲ. ತಾತಂದಿರು ಸೇರಿದಂತೆ ಸಂಬಂಧಿಗಳಲ್ಲಿ ಹೆಚ್ಚಿನ ಜನ ಸೇನೆಯಲ್ಲಿ ಕೆಲಸ ಮಾಡಿದ್ದಾರೆ. ಬಾಲ್ಯದಿಂದ ಅವರ ತ್ಯಾಗ ಮತ್ತು ಕರ್ತವ್ಯ ನಿಷ್ಠೆಯನ್ನು ಕೇಳುತ್ತಾ ಬೆಳೆದಿದ್ದೇನೆ. ಆಗೆಲ್ಲ ಸ್ವಾತ್ರಂತ್ಯ ಪೂರ್ವದಲ್ಲಿ ನಮ್ಮ ದೇಶ ಹೇಗಿದ್ದಿರಬಹುದು ಎಂದು ಕಲ್ಪಿಸಿಕೊಳ್ಳುತ್ತಿದ್ದೆ. ಆ ಕಾಲದಲ್ಲಿ ನನ್ನ ಮುತ್ತಾತನ ಕಾಲದವರು ಹೇಗೆ ಪ್ರತಿರೋಧ ಒಡ್ಡಿರಬಹುದು? ಎಷ್ಟೆಲ್ಲ ಸಾವು ನೋವು ಆಗಿರಬಹುದು ಎಂಬ ಚಿತ್ರ ಅವರ ಮಾತು ಕೇಳುತ್ತಿದ್ದಾಗ ಬರ್ತಾ ಇತ್ತು. ನನ್ನ ತಾತ ತನ್ನ ಯೋಧನ ವೀರಗಾಥೆಯ ಜೊತೆ ಅವರ ತಂದೆ–ತಾತನ ತ್ಯಾಗದ ಕಥನವನ್ನು ಹೇಳುತ್ತಿದ್ದರು. ದೇಶವನ್ನು ಸ್ವತಂತ್ರಗೊಳಿಸಲು ನಮ್ಮ ಪೂರ್ವಿಕರು ದೊಡ್ಡ ತ್ಯಾಗ ಮಾಡಿದ್ದಾರೆ. ಅಸಂಖ್ಯಾತರು ತಮ್ಮ ಪ್ರಾಣವನ್ನು ಸ್ವಾತಂತ್ರ್ಯಕ್ಕಾಗಿ ಬಲಿದಾನ ಮಾಡಿದ್ದಾರೆ. ಅದೆಲ್ಲ ನೆನಪಿಸಿಕೊಂಡರೆ ಈಗಲೂ ಮೈ ಜುಮ್ಮೆನ್ನುತ್ತದೆ. ಆ ಕಾರಣಕ್ಕೆ ಇದು ಭಾರತೀಯರಾದ ನಮಗೆ ಅತ್ಯಂತ ಮಹತ್ವದ ದಿನ. ನಾವೆಲ್ಲ ಸಂಭ್ರಮಿಸುವ ಸ್ವಾತಂತ್ರ್ಯದ ಹಿಂದೆ ಹೋರಾಟದ ದೀರ್ಘ ಪರಂಪರೆಯಿದೆ ಅದು ಸ್ಮರಿಸಬೇಕು ಎಂದು ಅನಿಸುತ್ತದೆ.

◆ **ನಿರೂಪಣೆ–ನಟನೆ ನಿಮಗೆ ಯಾವುದು ಹೆಚ್ಚು ಆಪ್ತ?**

ನನಗೆ ಎರಡೂ ತುಂಬ ಇಷ್ಟ. ನಾನು ಅಭಿನಯವನ್ನೇ ಮೊದಲು ಆರಂಭಿಸಿದ್ದೇನೆ. ಈಗಲೂ ನಟಿಸುತ್ತಿದ್ದೇನೆ. ಸದ್ಯ ಶಿವರಾಜ್ ಕುಮಾರ್ ಅವರ ಜೊತೆ ಒಂದು ಸಿನಿಮಾದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ದೀರ್ಘ ಬಿಡುವಿನ ನಂತರ ಸಮರ್ಥ ಪಾತ್ರದ ಮೂಲಕ ಅಭಿನಯ ಲೋಕಕ್ಕೆ ಮರುಪ್ರವೇಶ ಮಾಡುತ್ತಿದ್ದೇನೆ. ಒಂದು ರೀತಿಯಲ್ಲಿ ನಟನೆ ಎನ್ನುವುದು ನನಗೆ ರಕ್ತಗತವಾಗಿದೆ. ನಿರೂಪಣೆಯನ್ನು ಆಕಸ್ಮಿಕವಾಗಿ ಆರಂಭಿಸಿದೆ. ಆದರೆ ಅದನ್ನು ತುಂಬ ಇಷ್ಟಪಟ್ಟು ಮಾಡುತ್ತಿದ್ದೇನೆ. ಅದರಲ್ಲಿ ನಾನು ಏನು ಅನ್ನುವುದನ್ನು ತೋರಿಸಲು ಅವಕಾಶ ಇದೆ. ಯಾವತ್ತೇ ನಾನು ವೇದಿಕೆ ಹತ್ತಿದರೂ ನನ್ನ ಸ್ವಂತಿಕೆಯನ್ನು ಹೇಗೆ ನಿರೂಪಿಸಬಹುದು ಎಂದು ಚಿಂತಿಸುತ್ತೇನೆ. ನಿರೂಪಣೆ ಎನ್ನುವುದು ಜವಾಬ್ದಾರಿಯ ಕೆಲಸ. ಒಂದು ದೊಡ್ಡ ವೇದಿಕೆಯನ್ನು ನಿಯಂತ್ರಿಸುವ ಜೊತೆಗೆ ಅದರ ಉದ್ದೇಶವನ್ನು ಸಾಕಾರಗೊಳಿಸಬೇಕು. ಅದಕ್ಕೆ ನಿರೂಪಕರೆ ಸೂತ್ರವಾಗಿರಬೇಕಾಗುತ್ತದೆ. ಹಾಗಾಗಿ ತುಂಬ ಪ್ರೀತಿಯಿಂದ ಆ ಕೆಲಸವನ್ನು ಮಾಡುತ್ತೇನೆ.

◆ **ರಿಯಾಲಿಟಿ ಶೋ ಸ್ಪರ್ಧಿ ಆಗಿದ್ದವರು, ಕಾರ್ಯಕ್ರಮ ನಿರ್ವಾಹಕರಾಗಿ 'ಜೋಡಿ ನಂ1' ಸ್ಪರ್ಧಿಗಳಿಗೇನು ಹೇಳುತ್ತೀರಿ?**

'ಬಿಗ್ ಬಾಸ್' ಮತ್ತು 'ಡಾನ್ಸ್ ಶೋ' ನಾನು ಎರಡು ಶೋಗಳಲ್ಲಿ ಸ್ಪರ್ಧಿಸಿದ್ದೆ. ಹಾಗೆಯೇ ಡಾನ್ಸ್ ಕಾರ್ಯಕ್ರಮ ನಿರೂಪಣೆ ಮಾಡಿದ್ದೇನೆ. ಸ್ಪರ್ಧಿಗಳು ಯಾವುದೇ ಕಾರಣಕ್ಕೂ ಒತ್ತಡಕ್ಕೆ ಒಳಗಾಗಬಾರದು. ಆರಾಮಾಗಿ ಆ ಕ್ಷಣಕ್ಕೆ ಬೇಕಾಗುವ ಕೌಶಲ್ಯ ಮತ್ತು ಕ್ರಿಯಾಶೀಲತೆಯನ್ನು ತೋರಿಸಬೇಕು. ಏನೇ ಮಾಡಿದರೂ ಅನುಭವಿಸುತ್ತಾ ಮಾಡಬೇಕು. ಜನ ಅದನ್ನೇ ನೋಡಲು ಇಷ್ಟಪಡುತ್ತಾರೆ. ತುಂಬ ಸ್ಪರ್ಧಾತ್ಮಕ ಮನೋಭಾವದಲ್ಲಿ ಪೈಪೋಟಿ ನೀಡಬೇಕು ಎಂದುಕೊಳ್ಳುವ ಅಗತ್ಯ ಇಲ್ಲ. ಖುಷಿಯಾಗಿ ಭಾಗಿಯಾದರೆ ಅದು ಪರದೆಯಲ್ಲಿಯೂ ಪ್ರತಿಫಲನವಾಗುತ್ತದೆ.

◆ **ದ್ವಿಪಾತ್ರ–ಏಕಪಾತ್ರ ನಿರ್ವಹಣೆಯ ಸವಾಲುಗಳು ಹೇಗಿರುತ್ತವೆ?**

ಸಿನಿಮಾದಲ್ಲಾದರೆ ದಿನದಲ್ಲಿ ಒಂದೇ ದೃಶ್ಯ ಮಾಡುತ್ತೇವೆ. ಟಿವಿಯಲ್ಲಿ ಕಡಿಮೆ ಸಮಯ ಇರುತ್ತದೆ. ಒಂದು ದಿನದಲ್ಲಿ ಹತ್ತು ದೃಶ್ಯ ನಟಿಸಿದ ಸಂದರ್ಭವೂ ಇದೆ. ಅದು ಎಷ್ಟು ಒತ್ತಡವನ್ನು ಹಾಕುತ್ತದೆ ಎಂದರೆ, ಉಸಿರಾಡಲು ಪುರುಸೊತ್ತು ಬೇಕು ಎನಿಸುತ್ತದೆ. ಕ್ಯಾಮೆರಾ ಆನ್ ಆಗಿರುತ್ತದೆ ಕಲಾವಿದರಾದ ನಾವು ಆ ತಕ್ಷಣವೇ ಮೇಕಪ್ ಬದಲಿಸಿಕೊಂಡು ಮತ್ತೊಂದು ಪಾತ್ರಕ್ಕೆ ಬರಬೇಕು. ಏಕ ಕಾಲಕ್ಕೆ ಭಿನ್ನ ಭಾವ ಪ್ರಕಟಿಸಬೇಕು. ಹಾಗೆಂದು ಒಂದೇ ಪಾತ್ರ ನಿರ್ವಹಣೆ ಸುಲಭ ಎಂದಲ್ಲ. ಕಲಾವಿದರಾದವರು ಸವಾಲನ್ನು ಎದುರಿಸಲು ಸಿದ್ಧರಾಗಿರಬೇಕು. ಪ್ರತಿ ಪಾತ್ರಕ್ಕೂ ಜೀವ ತುಂಬುವುದು ಅವರ ಕರ್ತವ್ಯ. ನಾವು ಪಾತ್ರಕ್ಕಾಗಿ ಏನೇ ಮಾಡಿದರೂ ಅದರದೇ ಆದ ಅಗತ್ಯಗಳಿರುತ್ತವೆ.

ಅಮೃತ ಮಥನ

◆ **ನಿಮಗೆ ಯಾರಾದರೂ ಟಿಪ್ಸ್ ಕೇಳಿದರೆ...**

ಯಾವುದೂ ಸಿದ್ಧ ರೂಪದಲ್ಲಿ ಸಿಗಲ್ಲ. ಬಹುತೇಕರು ಕ್ವಿಕ್ ಫಲಿತಾಂಶ ಬಯಸುತ್ತಾರೆ. ಹಾಗೆ ಬಂದಿದ್ದು ಹಾಗೇ ಹೋಗುತ್ತದೆ. ಸಹನೆ ಮತ್ತು ತಾಳ್ಮೆಯಿಂದ ಕಷ್ಟಪಟ್ಟು ಗಳಿಸಿದ್ದು ಉಳಿಯುತ್ತದೆ. ಪರಿಶ್ರಮಕ್ಕೆ ಮನ್ನಣೆ ಸಿಕ್ಕೇ ಸಿಗುತ್ತದೆ. ಒಮ್ಮಿಂದೊಮ್ಮೆಲೆ ನಿರೀಕ್ಷೆ ಮಾಡಲು ಆಗದು. ಯಾರೂ ಯಾರಂತೆ ಆಗಬಾರದು. ಸ್ವಂತಿಕೆಯನ್ನು ಬೆಳೆಸಿಕೊಳ್ಳಬೇಕು. ನಮ್ಮ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಪಟ್ಟಿ ಮಾಡಿಕೊಳ್ಳಬೇಕು. ಅದರ ಆಧಾರದ ಮೇಲೆ ತಾಲೀಮು ನಡೆಸಬೇಕು. ಯಶಸ್ಸು ಸಿಗಲಿಲ್ಲವೇ ಹಾಗೆಂದು ಹತಾಶರಾಗುವ ಅಗತ್ಯ ಇಲ್ಲ. ಬೇರೆ ಆಯ್ಕೆಗಳೂ ಇರುತ್ತವೆ. ನಾನು ಮಗು ಹೆತ್ತ ಬಳಿಕ ಸಡನ್ ಶೋ ಮಾಡ್ತಿಲ್ಲ. ಶೋ ಪೂರ್ವದಲ್ಲೇ ಒಂದು ವರ್ಷ ತಾಲೀಮು ಮಾಡಿದ್ದೇನೆ. ಟಿಪ್ಸ್ ಅಂದರೆ ಪರಿಶ್ರಮದಿಂದ ಗುರಿಮುಟ್ಟಲು ಯತ್ನಿಸಿದರೆ ಎಲ್ಲ ಸಿಗುತ್ತದೆ.

◆ **ಶ್ವೇತಾ ಆಗಿ ಕಾಡುವ ಪಾತ್ರಗಳು**

ಧಾರಾವಾಹಿಯಲ್ಲಿ ಹೇಳುವುದಾದರೆ 'ಕಾದಂಬರಿ', 'ಅರುಂಧತಿ' ನನಗೆ ಜೀವನ ಕೊಟ್ಟ ಪಾತ್ರಗಳು. ಖಂಡಿತ ಅವು ಸ್ಮರಣೀಯ. ನಿರೂಪಣೆ ಅನ್ನುವುದಾದರೆ 'ಯಾರಿಗುಂಟು ಯಾರಿಗಿಲ್ಲ' ಮೂಲಕ ಆರಂಭಿಸಿದೆ. ಈಗ 'ಜೋಡಿ ನಂ 1' ಮಾಡುತ್ತಿದ್ದೇನೆ. ತುಂಬ ದಿನಗಳ ನಂತರ ಅವಕಾಶ ಸಿಕ್ಕಿದೆ. ಇದನ್ನು ಇಷ್ಟಪಟ್ಟು ಮಾಡ್ತಾ ಇದ್ದೇನೆ. ನಿರೂಪಣೆ ಪಯಣದಲ್ಲಿ ಇದನ್ನು ಮರೆಯಲು ಸಾಧ್ಯವೇ ಇಲ್ಲ.

■ **ರಾಘವೇಂದ್ರ ಕೆ.**